**All India Radio: Bangalore**
**Regional Bulletin In Kannada**
**01.02.2025 / 2.30 p.m.**
**ಆಕಾಶವಾಣಿ ಬೆಂಗಳೂರು**

**ಪ್ರದೇಶ ಸಮಾಚಾರ**

**01.02.2025 / 2.30 p.m.**
**<><><><>**

ಮುಖ್ಯಾಂಶಗಳು

1. ಮಧ್ಯಮ ವರ್ಗಕ್ಕೆ ಕೇಂದ್ರ ಸರ್ಕಾರ ಭರಪೂರ ಕೊಡುಗೆ ; ಆದಾಯ ತೆರಿಗೆ ವಿನಾಯಿತಿ ಮಿತಿ ೧೨ ಲಕ್ಷಕ್ಕೆ ಏರಿಕೆ
2. ರೈತರಿಗಾಗಿ 'ಧನ್ ಧಾನ್ಯ ಕೃಷಿ' ಯೋಜನೆ ಘೋಷಿಸಿದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ - ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲ ಪ್ರಮಾಣ ೫ ಲಕ್ಷಕ್ಕೆ ಹೆಚ್ಚಳ
3. ಆರೋಗ್ಯ ಕ್ಷೇತ್ರದಲ್ಲಿ ಕೃತಕ ಬುದ್ಧಿ ಮತ್ತೆ ಅಳವಡಿಕೆ - ಕ್ಯಾನ್ಸರ್ ಔಷಧದ ಬೆಲೆ ಇಳಿಸಿದ ಕೇಂದ್ರ ಸರ್ಕಾರ
4. ನವೋದ್ಯಮ ಕಂಪನಿಗಳಿಗೆ ೨೦ ಕೋಟಿ ರೂಪಾಯಿವರೆಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಲು ಕೇಂದ್ರ ತೀರ್ಮಾನ
5. ಮೊಬೈಲ್, ಎಲೆಕ್ಟ್ರಿಕ್ ಕಾರುಗಳ ಬೆಲೆ ಇಳಿಕೆ - ಚಿನ್ನ, ಬೆಳ್ಳಿ, ಆಮದು ಕಾರಿನ ಬೆಲೆ ಹೆಚ್ಚಳ

<><><><>

ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಇಂದು ಬಜೆಟ್ ಮಂಡಿಸಿದ್ದು, ಕೃಷಿ ಕ್ಷೇತ್ರಕ್ಕೆ ಭರಪೂರ ಕೊಡುಗೆ ಘೋಷಿಸಿದ್ದಾರೆ. ಮಧ್ಯಮವರ್ಗದವರಿಗೂ ಆದಾಯ ತೆರಿಗೆ ವಿನಾಯಿತಿ ಮಿತಿ ಹೆಚ್ಚಿಸುವ ಮೂಲಕ ಸಿಹಿ ಸುದ್ದಿ ನೀಡಿದ್ದಾರೆ. ನವೋದ್ಯಮ ಕಂಪನಿಗಳು ಹಾಗೂ ಸಣ್ಣ ಹಾಗೂ ಅತಿ ಸಣ್ಣ ಕೈಗಾರಿಕೆಗಳಿಗೂ ಒತ್ತು ನೀಡಿದ್ದಾರೆ. ಬಡವರು, ಮಹಿಳೆಯರು ಹಾಗೂ ಯುವಕರನ್ನು ಕೇಂದ್ರೀಕರಿಸಿದ್ದಾರೆ. ದೇಶಾದ್ಯಂತ ವೈದ್ಯಕೀಯ ಕಾಲೇಜುಗಳು ಹಾಗೂ ಆಸ್ಪತ್ರೆಗಳಲ್ಲಿ ೧೦ ಸಾವಿರ ಹೊಸ ಸೀಟುಗಳನ್ನು ಸರ್ಕಾರ ಸೇರಿಸಲಿದೆ. ೫ ಐಐಟಿಗಳಲ್ಲಿ ೬ ಸಾವಿರದ ೫೦೦ ಹೆಚ್ಚುವರಿ ಸೀಟುಗಳನ್ನು ನೀಡಲು ನಿರ್ಧರಿಸಲಾಗಿದೆ.

<><><><>

ಆದಾಯ ತೆರಿಗೆ ಪಾವತಿಸುವವರಿಗೆ ಕೇಂದ್ರ ಸರ್ಕಾರ ಸಿಹಿ ಸುದ್ದಿ ನೀಡಿದೆ. ತೆರಿಗೆ ವಿನಾಯಿತಿಯನ್ನು ೭ ಲಕ್ಷದಿಂದ ೧೨ ಲಕ್ಷಕ್ಕೆ ಏರಿಸಲಾಗಿದೆ. ೧೨ ಲಕ್ಷದವರೆಗೆ ತೆರಿಗೆ ವಿನಾಯಿತಿ ನೀಡಲಾಗಿದೆ.

## ಧ್ವನಿ : ನಿರ್ಮಾಲಾ ಸೀತಾರಾಮನ್ (ಆದಾಯ ತೆರಿಗೆ)

೪ರಿಂದ ೮ ಲಕ್ಷ ಆದಾಯವಿರುವವರು ಶೇಕಡ ೫ ರಷ್ಟು, ೮ ಲಕ್ಷದಿಂದ ೧೨ ಲಕ್ಷದ ವರೆಗೆ ಶೇಕಡ ೧೦, ೧೨ ಲಕ್ಷದಿಂದ ೧೫ ಲಕ್ಷದವರೆಗೆ ಶೇಕಡ ೧೫, ೧೫ ರಿಂದ ೨೦ ಲಕ್ಷದವರೆಗೆ ಶೇಕಡ ೨೦, ೨೦ ರಿಂದ ೨೪ ಲಕ್ಷದವರೆಗೆ ಶೇಕಡ ೨೫ ರಷ್ಟು ತೆರಿಗೆ ವಿಧಿಸಲಾಗಿದೆ. ೨೪ ಲಕ್ಷ ಮೇಲ್ಪಟ್ಟ ಆದಾಯಕ್ಕೆ ಶೇಕಡ ೩೦ರಷ್ಟು ತೆರಿಗೆ ವಿಧಿಸಬೇಕಾಗುತ್ತದೆ. ಹಿರಿಯ ನಾಗರಿಕರಿಗೆ ನೀಡಲಾಗುವ ವಿನಾಯಿತಿಯನ್ನು ೫೦ಸಾವಿರದಿಂದ ೧ ಲಕ್ಷಕ್ಕೆ ಏರಿಸಲಾಗಿದೆ.

## ಧ್ವನಿ : ನಿರ್ಮಲಾ ಸೀತಾರಾಮನ್ (ಹಿರಿಯ ನಾಗರಿಕರು)

ಮುಂದಿನ ವಾರ ಹೊಸ ಆದಾಯ ತೆರಿಗೆ ಮಸೂದೆ ಮಂಡನೆ ಮಾಡಲು ನಿರ್ಧರಿಸಲಾಗಿದೆ ಎಂದು ನಿರ್ಮಲಾ ಸೀತಾರಾಮನ್ ಲೋಕಸಭೆಯಲ್ಲಿ ಘೋಷಿಸಿದ್ದಾರೆ. ಬಾಡಿಗೆ ಮೇಲಿನ ಟಿಡಿಎಸ್ ಮಿತಿಯನ್ನು ಹೆಚ್ಚಿಸಲಾಗಿದೆ. ವಿದೇಶದಿಂದ ರವಾನಿಸುವ ಹಣಕ್ಕೆ ತೆರಿಗೆ ಕಡಿತಗೊಳಿಸಲು ನಿರ್ಧರಿಸಲಾಗಿದೆ. ಆಕಾಶವಾಣಿಯೊಂದಿಗೆ ಕೇಂದ್ರ ಸರ್ಕಾರದ ಆದಾಯ ತೆರಿಗೆ ಬಗ್ಗೆ ಹಣಕಾಸು ತಜ್ಞರಾದ ನಾರಾಯಣ ಯಾಗಿ ಮಾತನಾಡಿ, ಇದು ಉತ್ತಮ ಬಜೆಟ್ ಎಂದು ಶ್ಲಾಘಿಸಿದ್ದಾರೆ.

## ಧ್ವನಿ : ನಾರಾಯಣ ಯಾಗಿ

<><><><>

ಕ್ಯಾನ್ಸರ್ ಔಷಧದಲ್ಲಿ ಬೆಲೆಯನ್ನು ಕೇಂದ್ರ ಸರ್ಕಾರ ಇಳಿಕೆಮಾಡಲು ತೀರ್ಮಾನಿಸಿದೆ. ಮೊಬೈಲ್ ಬೆಲೆಯಲ್ಲಿಯೂ ಇಳಿಕೆಯಾಗಿದ್ದು ಸ್ವದೇಶಿ ಬಟ್ಟೆಗಳು, ಚರ್ಮದ ಉತ್ಪನ್ನಗಳು ಹಾಗೂ ಎಲ್ಇಡಿ, ಎಲೆಕ್ಟ್ರಿಕ್ ಕಾರುಗಳ ಬೆಲೆಯಲ್ಲಿ ಇಳಿಕೆಯಾಗಿದೆ. ಇದೇ ವೇಳೆ ಮೊಬೈಲ್ ರೀಚಾರ್ಜ್ ಮತ್ತು ಇಂಟರ್ನೆಟ್ ಸೇವೆಗಳು, ವಿಮಾನ ಟಿಕೆಟ್ ದರ, ಚಿನ್ನ ಮತ್ತು ಬೆಳ್ಳಿ, ದುಬಾರಿ ಎಲೆಕ್ಟ್ರಾನಿಕ್ಸ್ ವಸ್ತುಗಳು, ಆಮದು ಕಾರುಗಳು, ತಂಬಾಕು ಮತ್ತು ಸಿಗರೇಟ್ ಬೆಲೆಯಲ್ಲಿ ಇನ್ನು ಮುಂದೆ ಹೆಚ್ಚಳವಾಗಲಿದೆ.

<><><><>

ಈ ಬಾರಿಯ ಅಯವ್ಯಯದಲ್ಲಿ ಕೃಷಿ ಕ್ಷೇತ್ರಕ್ಕೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಭರಪೂರ ಕೊಡುಗೆ ನೀಡಿದ್ದಾರೆ. ಕೃಷಿ ಉತ್ಪಾದಕತೆ, ಸುಸ್ಥಿರ ಪದ್ಧತಿಗಳು, ಸಂಗ್ರಹಣೆ ಹೆಚ್ಚಿಸುವುದು, ನೀರಾವರಿ ಸೌಲಭ್ಯಗಳನ್ನು ಸುಧಾರಿಸುವುದು ಮತ್ತು ಸಾಲಗಳ ಲಭ್ಯತೆಯನ್ನು ಸುಗಮಗೊಳಿಸುವ ಗುರಿಯನ್ನು ಹೊಂದಿರುವ ಪ್ರಧಾನ ಮಂತ್ರಿ ಧನ್ ಧಾನ್ಯ ಕೃಷಿ ಯೋಜನೆಯನ್ನು ಸರ್ಕಾರ ಕೈಗೊಳ್ಳಲಿದೆ. ಪ್ರಧಾನ ಮಂತ್ರಿ ಕೃಷಿ ಯೋಜನೆಯಿಂದ ೧.೭ ಕೋಟಿ ರೈತರಿಗೆ ಅನುಕೂಲವಾಗುತ್ತಿದ್ದು ಇದು ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುತ್ತದೆ ಎಂದು ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ರೈತರಿಗೆ ಮತ್ತಷ್ಟು ಸಾಲವನ್ನು ನೀಡುವ ದೃಷ್ಟಿಯಿಂದ ಕಿಸಾನ್ ಕ್ರೆಡಿಟ್ ಕಾರ್ಡ್ ಮಿತಿಯನ್ನು ೩ ಲಕ್ಷದಿಂದ ೫ ಲಕ್ಷಕ್ಕೆ ಹೆಚ್ಚಿಸಲು ನಿರ್ಧರಿಸಲಾಗಿದೆ. ಯೂರಿಯಾ ಪೂರೈಕೆಯನ್ನು ಇನ್ನಷ್ಟು ಹೆಚ್ಚಿಸಲು ರೈತರಿಗಾಗಿ ಮೂರು ಯೂರಿಯಾ ಪ್ಲಾಂಟ್ ನಿರ್ಮಾಣ ಮಾಡಲು ತೀರ್ಮಾನಿಸಲಾಗಿದ್ದು, ಅಸ್ಸಾಂನಲ್ಲಿ ವಾರ್ಷಿಕ ೧೨.೭ ಲಕ್ಷ ಮೆಟ್ರಿಕ್ ಟನ್ ಸಾಮರ್ಥ್ಯದ ಯೂರಿಯಾ ಪ್ಲಾಂಟ್ ನಿರ್ಮಾಣ ಮಾಡುವುದಾಗಿ ಬಜೆಟ್ ನಲ್ಲಿ ಘೋಷಿಸಲಾಗಿದೆ. ಪೂರ್ವ ಪ್ರದೇಶದಲ್ಲಿ ನಿಷ್ಕ್ರಿಯವಾಗಿದ್ದ ೩ ಯೂರಿಯಾ ಸ್ಥಾವರಗಳನ್ನು ಮತ್ತೆ ತೆರೆಯಲಾಗಿದೆ ಎಂದು ತಿಳಿಸಿದ್ದಾರೆ. ಹತ್ತಿ ಕೃಷಿಯ ಸುಸ್ಥಿರತೆಯನ್ನು ಸುಧಾರಿಸಲು ಮತ್ತು ಹತ್ತಿ ಪ್ರಭೇದಗಳನ್ನು ಉತ್ತೇಜಿಸಲು ೫ ವರ್ಷಗಳ ಹತ್ತಿ ಮಿಷನ್ ಹಾಗೂ ರೈತರಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ಬೆಂಬಲವನ್ನು ಒದಗಿಸಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ. ಇದೇ ವೇಳೆ ಪ್ರೋಟೀನ್ ಭರಿತ ಆಹಾರಕ್ಕಾಗಿ ತಾವರೆ ಬೀಜ ಬೆಳೆಯಲು ಪ್ರೋತ್ಸಾಹ ನೀಡುವುದಾಗಿ ಅಯವ್ಯಯದಲ್ಲಿ ಘೋಷಿಸಿದ್ದಾರೆ. ಖಾದ್ಯ ಎಣ್ಣೆ ಬೀಜಗಳಲ್ಲಿ ಆತ್ಮನಿರ್ಭರತೆ ಸಾಧಿಸಲು ಸರ್ಕಾರ ಖಾದ್ಯ ಎಣ್ಣೆ ಬೀಜಗಳ ರಾಷ್ಟ್ರೀಯ ಮಿಷನ್ ಜಾರಿಗೊಳಿಸಲು ನಿರ್ಧರಿಸಿದೆ. ವಿತ್ತ ಸಚಿವೆ ನಿರ್ಮಲಾ ಸೀತರಾಮನ್, ಮಂಡಿಸಿರುವ ಬಜೆಟ್ ನಲ್ಲಿ

ಕಿಸಾನ್ ಕ್ರೆಡಿಟ್ ಸಾಲ ೩ ಲಕ್ಷ ದಿಂದ ೫ ಲಕ್ಷಕ್ಕೆ ಏರಿಕೆ ಮಾಡಿರುವುದು ಸಂತೋಷದ ವಿಚಾರ ಹಾಗೂ ಕ್ಯಾನ್ಸರ್ ಸೇರಿದಂತೆ ಆರೋಗ್ಯದ ಔಷಧಿಗಳ ಬೆಲೆ ಇಳಿಕೆ ಮಾಡಿರುವುದು ಅಭಿನಂದನೀಯ ಎಂದು  ಕರ್ನಾಟಕ ರಾಜ್ಯ ರೈತ  ಸಂಘ ಮತ್ತು ಹಸಿರು ಸೇನೆ ಯುವ ಘಟಕದ  ಅಧ್ಯಕ್ಷ ಕಲ್ವಮಂಜಲಿ ರಾಮು ಶಿವಣ್ಣ ಅಭಿಪ್ರಾಯಪಟ್ಟಿದ್ದಾರೆ.

**ಧ್ವನಿ : ಶಿವಣ್ಣ (ಕೋಲಾರ)**

<><><><>

ಆರೋಗ್ಯ ಕ್ಷೇತ್ರದಲ್ಲಿ ಎಐ ಬಳಕೆಗೆ ಮೊದಲ ಆದ್ಯತೆ ನೀಡಲಾಗಿದೆ. ಮುಂದಿನ ವರ್ಷ ಎಲ್ಲಾ ಜಿಲ್ಲೆಗಳಲ್ಲಿ ಕ್ಯಾನ್ಸರ್ ಆಸ್ಪತ್ರೆ ಹಾಗೂ ಡೇ ಕೇರ್ ನಿರ್ಮಿಸಲು ತೀರ್ಮಾನಿಸಲಾಗಿದೆ. ೩೬ ಜೀವ ರಕ್ಷಕ ಔಷಧಗಳಿಗೆ ಕಸ್ಟಮ್ಸ್ ಸುಂಕದಿಂದ ಸಂಪೂರ್ಣವಾಗಿ ವಿನಾಯಿತಿ ನೀಡಲಾಗುವುದು ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಬಾಣಂತಿಯರಿಗೆ ಪೋಷಕಾಂಶ ಭರಿತ ಆಹಾರ ನೀಡಲು ತೀರ್ಮಾನ ಗಿಗ್ ಕಾರ್ಮಿಕರಿಗೆ ಆರೋಗ್ಯ ವಿಮೆ ವಿಸ್ತರಿಸಲು ತೀರ್ಮಾನಿಸಲಾಗಿದೆ.

<><><><>

ಗ್ರಾಮೀಣ ಪ್ರದೇಶಗಳಲ್ಲಿನ ಎಲ್ಲಾ ಸರ್ಕಾರಿ ಶಾಲೆಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಬ್ರಾಡ್‌ಬ್ಯಾಂಡ್ ಸಂಪರ್ಕವನ್ನು ವಿಸ್ತರಿಸಲಾಗುವುದು ಎಂದು ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.  ಸ್ವಸಹಾಯ ಸಂಘಗಳಿಗೆ ಗ್ರಾಮೀಣ ಕ್ರೆಡಿಟ್ ಕಾರ್ಡ್  ನೀಡಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದ್ದಾರೆ.  ಗ್ರಾಮೀಣ ಪ್ರದೇಶಗಳಿಗೂ ಇಂಡಿಯಾ ಪೋಸ್ಟ್ ಪೇಮೆಂಟ್  ಗ್ರಾಮೀಣ ಪ್ರದೇಶದಲ್ಲಿ ಬ್ಯಾಂಕಿಗ್ ಸೇವೆ ವಿಸ್ತರಣೆಗೆ ತೀರ್ಮಾನ ಬೀದಿ ವ್ಯಾಪಾರಿಗಳಿಗೆ ಇ-ಶ್ರಮ್ ಪೋರ್ಟಲ್ ಮೂಲಕ ಸಾಲ ನೀಡುವ ಹೊಂದಲಾಗಿದೆ.

<><><><>

ಈ ಬಾರಿಯ ಬಜೆಟ್ ನಲ್ಲಿ ಮಹಿಳೆಯರಿಗೆ ಹೆಚ್ಚು ಆದ್ಯತೆ ನೀಡಲಾಗಿದೆ. ಉದ್ಯಮ ಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಮಹಿಳೆಯರನ್ನು ಉತ್ತೇಜಿಸುವ ಸಲುವಾಗಿ ಹೊಸ ಯೋಜನೆ ಜಾರಿಗೊಳಿಸಲಾಗುವುದು ಎಂದು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದ್ದಾರೆ. ಮುಂದಿನ ಐದು ವರ್ಷಗಳಲ್ಲಿ ೫ ಲಕ್ಷ ಮಹಿಳಾ ಉದ್ಯಮಿಗಳಿಗೆ ೨ ಕೋಟಿ ರೂಪಾಯಿ ವರೆಗಿನ ಅವಧಿ ಸಾಲವನ್ನು ನೀಡಲು ಸರ್ಕಾರವು ಯೋಜಿಸಿದ್ದು, ಇದು ಮಹಿಳಾ ಉದ್ದಿಮೆದಾರರಿಗೆ ಅನುಕೂಲವಾಗಲಿದೆ. ಈ ಯೋಜನೆಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಹಾಗೂ ಮಹಿಳಾ ಉದ್ಯಮಿಗಳು ಹೊಸ ವ್ಯವಹಾರಗಳನ್ನು ಪ್ರಾರಂಭಿಸಲು ಸಾಲ ಸೌಲಭ್ಯ, ಸಬ್ಸಿಡಿಗಳು ಮತ್ತು ಮಾರ್ಕೆಟಿಂಗ್ ನೆರವು ಸೇರಿದಂತೆ ವಿವಿಧ ಪ್ರಯೋಜನಗಳನ್ನು ಒದಗಿಸಲಿದೆ.

<><><><>

ಪ್ರಸ್ತುತ ದೇಶದ ಉತ್ಪಾದನೆಯ ಶೇಕಡ ೩೬ರಷ್ಟು ಉತ್ಪಾದಿಸುವ ೧ ಕೋಟಿಗೂ ಹೆಚ್ಚು ನೋಂದಾಯಿತ ಎಂಎಸ್‌ಎಂಇಗಳು ಭಾರತವನ್ನು ಜಾಗತಿಕ ಉತ್ಪಾದನಾ ಕೇಂದ್ರವಾಗಿ ಇರಿಸಲು ಒಟ್ಟಾಗಿವೆ. ಈ ಎಂಎಸ್‌ಎಂಇಗಳು ನಮ್ಮ ರಫ್ತಿನ ಶೇಕಡ ೪೫ರಷ್ಟು ಕೊಡುಗೆ ನೀಡುತ್ತವೆ.  ಈ ಕ್ಷೇತ್ರಕ್ಕೆ ಸಹಾಯ ಮಾಡಲು ಎಲ್ಲಾ ಎಂಎಸ್‌ಎಂಇ ಗಳ ವರ್ಗೀಕರಣಕ್ಕಾಗಿ ಹೂಡಿಕೆ ಮಿತಿಯನ್ನು ಎರಡೂವರೆ ಪಟ್ಟು ಮತ್ತು ವಹಿವಾಟು ಮಿತಿಗಳನ್ನು ಎರಡು ಪಟ್ಟು ಹೆಚ್ಚಿಸಲಾಗುವುದು. ಇದು ನಮ್ಮ ಯುವಕರಿಗೆ ಬೆಳೆಯಲು ಮತ್ತು ಉದ್ಯೋಗವನ್ನು ಸೃಷ್ಟಿಸಲು ಉತ್ತೇಜನ ನೀಡುತ್ತದೆ ಎಂದು ನಿರ್ಮಲಾ ಸೀತಾರಾಮನ್ ಘೋಷಿಸಿದ್ದಾರೆ. ಪ್ರಸ್ತುತ ೧ ಕೋಟಿಗೂ

ಹೆಚ್ಚು ಸಣ್ಣ ಮತ್ತು ಅತೀಸಣ್ಣ ಹಾಗೂ ಸೂಕ್ಷ್ಮ ಕೈಗಾರಿಕೆಗಳು  ೭.೫ ಕೋಟಿ ಜನರಿಗೆ ಉದ್ಯೋಗ ನೀಡುತ್ತಿವೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. “ಸಾಲದ ಪ್ರವೇಶವನ್ನು ಸುಧಾರಿಸಲು ಕ್ರೆಡಿಟ್ ವ್ಯಾಪ್ತಿಯನ್ನು ಹೆಚ್ಚಿಸಲಾಗುವುದು. ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳಿಗೆ ಇದನ್ನು ೫ ಕೋಟಿ ರೂಪಾಯಿಗಳಿಂದ ೧೦ ಕೋಟಿ ರೂಪಾಯಿಗಳಿಗೆ ಹೆಚ್ಚಿಸಲಾಗುವುದು. ಸ್ಟಾರ್ಟ್‌ಅಪ್‌ಗಳಿಗೆ, ಇದನ್ನು ೧೦ ಕೋಟಿ ರೂಪಾಯಿ ಹೆಚ್ಚಿಸುವುದಾಗಿ ಘೋಷಿಸಿದ್ದಾರೆ ಉತ್ತಮವಾಗಿ ನಡೆಸುವ ರಫ್ತುದಾರ ಎಂಎಸ್‌ಎಂಇಗಳಿಗೆ ೨೦ ಕೋಟಿ ರೂಪಾಯಿಗಳ ಅವಧಿ ಸಾಲಗಳನ್ನು ನೀಡಲಾಗುವುದು” ಎಂದು ಅವರು ಹೇಳಿದ್ದಾರೆ.

**ಧ್ವನಿ : ಸುರೇಶ್ (ಎಂಎಸ್‌ಎಂಇ)**

<><><><>

ರಾಜ್ಯಗಳಿಗೆ ೫೦ ವರ್ಷಗಳ ಬಡ್ಡಿ ರಹಿತ ಸಾಲಕ್ಕಾಗಿ ೧.೫ ಲಕ್ಷ ಕೋಟಿ ರೂಪಾಯಿ ಮೀಸಲಿಟ್ಟಿರುವುದಾಗಿ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಲೀಥಿಯಂ ಬ್ಯಾಟರಿ ಹಾಗೂ ಮೊಬೈಲ್ ಬ್ಯಾಟರಿಗೆ ಸ್ವದೇಶಿ ತಯಾರಿಕೆಗೆ ಒತ್ತು ಹಾಗೂ ಸುಂಕ ವಿನಾಯಿತಿಗೆ ನಿರ್ಧರಿಸಲಾಗಿದೆ.  ಮೈಕ್ರೋ ಫೈನಾನ್ಸ್ ಕಂಪನಿಗಳಿಗೆ ಮೊದಲ ವರ್ಷದಲ್ಲಿ ೧೦ ಲಕ್ಷ ಕ್ರೆಡಿಟ್ ಕಾರ್ಡ್ ವಿಸ್ತರಣೆಯ ಗುರಿ ಹೊಂದಲಾಗಿದೆ.

<><><><>

ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಉತ್ತಮ ಬಜೆಟ್ ಮಂಡಿಸಿದ್ದು, ಪ್ರವಾಸೋದ್ಯಮ, ಆಸ್ಪತ್ರೆ ಹಾಗೂ ವೈಯಕ್ತಿಕ ತೆರಿಗೆಗೆ ಒತ್ತು ನೀಡಿರುವುದು ಶ್ಲಾಘನೀಯ ಎಂದು ಎಫ್‌ಕೆಸಿಸಿ ಅಧ್ಯಕ್ಷರಾದ ಬಾಲಕೃಷ್ಣ ತಿಳಿಸಿದ್ದಾರೆ. ಆಕಾಶವಾಣಿಯೊಂದಿಗೆ ಮಾತನಾಡಿದ ಅವರು, ಸಣ್ಣ ಕೈಗಾರಿಕೆಗಳಿಗೆ ನೀಡಿರುವ ಕೊಡುಗೆ ಕುರಿತಂತೆ ಕೇಂದ್ರ ಸರ್ಕಾರವನ್ನು ಅಭಿನಂದಿಸಿದ್ದಾರೆ.

**ಧ್ವನಿ : ಬಾಲಕೃಷ್ಣ (ಎಫ್‌ಕೆಸಿಸಿ)**

<><><><>

**ಮಸ್ಟ್**

ಕೇಂದ್ರ ಅಯವ್ಯಯ ಕುರಿತಂತೆ ಸಂಜೆ ೭.೪೫ ಕ್ಕೆ ಬಜೆಟ್ ಕುರಿತ ಚರ್ಚೆ ನಡೆಯಲಿದೆ. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸುರೇಶ್ ಸಾಗಾರ್ ಹಾಗೂ ಹಿರಿಯ ಪತ್ರಕರ್ತೆ ಆಶಾ ಕೃಷ್ಣ ಸ್ವಾಮಿ ಚರ್ಚೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಚರ್ಚಾ ಕಾರ್ಯಕ್ರಮವನ್ನು ಹಿರಿಯ ಪತ್ರಕರ್ತರಾದ ನಾರಯಣಸ್ವಾಮಿ ನಡೆಸಿಕೊಡಲಿದ್ದಾರೆ.

<><><><>

ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿರುವ ಬಜೆಟ್ ಬಗ್ಗೆ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶ್ಲಾಘಿಸಿದ್ದಾರೆ.

**ಧ್ವನಿ : ಬಸವರಾಜ ಬೊಮ್ಮಾಯಿ**

<><><><>

ಅಯವ್ಯಯದಲ್ಲಿ ದೇಶಿಯ ತಂತ್ರಜ್ಞಾನ ಕಾರ್ಖಾನೆಗಳಿಗೆ ಒತ್ತು ನೀಡಲಾಗಿದೆ. ಐಐಟಿ ಐಐಎಫ್‌ಸಿಗಳಿಗೆ ಅನುದಾನ ಹೆಚ್ಚಳಕ್ಕೆ ತೀರ್ಮಾನ ಕೈಗೊಳ್ಳಲಾಗಿದೆ. ಆಹಾರ ಭದ್ರತೆಗೂ ಅನುದಾನ ಹೆಚ್ಚಳಕ್ಕೆ ನಿರ್ಧರಿಸಲಾಗಿದೆ.   ೨೩

ಐಐಟಿಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಳಕ್ಕೆ ನಿರ್ಧಾರ, ನಗರ ಪ್ರದೇಶಗಳ ಅಭಿವೃದ್ಧಿಗೆ ೧ ಲಕ್ಷ ಕೋಟಿ ಹಣ ಮುದ್ರಾ ಯೋಜನೆ ಮೂಲಕ ಪ್ರವಾಸಿ ತಾಣಗಳ ಅಭಿವೃದ್ಧಿ ವಿಮಾ ಕ್ಷೇತ್ರದಲ್ಲಿ ಶೇಕಡ ೧೦೦ ರಷ್ಟು ವಿದೇಶಿ ಹೂಡಿಕೆಗೆ ಅವಕಾಶ ನೀಡಲಾಗಿದ್ದು, ಈಗಿರುವ ವಿದೇಶಿ ಹೂಡಿಕೆಯನ್ನು ಶೇಕಡ ೭೪ರಿಂದ ೧೦೦ಕ್ಕೆ ಏರಿಸಲಾಗಿದೆ.

<><><><>

ಜಲಜೀವನ್ ಯೋಜನೆಯನ್ನು ೨೦೨೮ ರ ವರೆಗೆ ವಿಸ್ತರಣೆ ಮಾಡಲಾಗಿದ್ದು, ಮುಂದಿನ ಮೂರು ವರ್ಷಗಳಲ್ಲಿ ೧೦೦ ಪ್ರತಿಶತ ಅನುಷ್ಠಾನ ವ್ಯಾಪ್ತಿ ಸಾಧಿಸಲಿದೆ. ಇದರ ಒಟ್ಟು ಮೀಸಲು ಅಯವ್ಯಯ ೬೭ ಸಾವಿರ ಕೋಟಿ ರೂಪಾಯಿಗೆ ಏರಿಸಲಾಗಿದೆ. ಭಾರತದ ಗ್ರಾಮೀಣ ಭಾಗದ ೮೦ ಪ್ರತಿಶತ ಜನಸಂಖ್ಯೆ ಪ್ರತಿನಿಧಿಸುವ ೧೫ ಕೋಟಿ ಕುಟುಂಬಗಳಿಗೆ ೨೦೧೯ ರಿಂದ ಜಲಜೀವನ್ ಯೋಜನೆಯ ಪ್ರಯೋಜನ ಲಭ್ಯವಾಗಿದೆ. ಪಿಎಂ-ಸ್ವನಿಧಿ ಯೋಜನೆಯನ್ನು ಮರು ರೂಪಿಸಿ, ಹೆಚ್ಚಿನ ಸಾಲ ನೀಡಲು ಒತ್ತು ನೀಡಲಾಗಿದೆ. ನಾಗರಿಕ ಕೇಂದ್ರಿತ ಹಾಗೂ ಸುಸ್ಥಿರ ನೀರು ಪೂರೈಕೆ ಹಾಗೂ ನಿರ್ವಹಣೆ, ಎಲ್ಲ ರಾಜ್ಯ ಸರ್ಕಾರಗಳಿಗೆ ಹೊಸ ತಿಳುವಳಿಕಾ ಒಪ್ಪಂದಗಳನ್ನು ಮಾಡಿಕೊಳ್ಳಲಾಗುವುದು ಎಂದರು ಸಚಿವರು ಬಜೆಟ್‌ನಲ್ಲಿ ಪ್ರಸ್ತಾಪಿಸಿದರು. ೨೦೨೪-೨೦೨೫ ರ ವರ್ಷದಲ್ಲಿ ೩೧.೪೭ ಲಕ್ಷ ಕೋಟಿ ಆದಾಯ ಹಾಗೂ ಒಟ್ಟು ತೆರಿಗೆಗಳ ಮೂಲಕ ೨೫.೫೭ ಲಕ್ಷ ಕೋಟಿ ಆದಾಯ ಹರಿದು ಬಂದಿದೆ. ೨೦೨೪-೨೦೨೫ರ ಒಟ್ಟು ವೆಚ್ಚ ೪೭.೧೬ ಲಕ್ಷ ಕೋಟಿಯಷ್ಟಿದೆ ಹಾಗೂ ೨೮.೩೭ ತೆರಿಗೆ ಸಂಗ್ರಹ ನಿರೀಕ್ಷೆ ಇದೆ.

<><> ಇಲ್ಲಿಗೆ ಪ್ರದೇಶ ಸಮಾಚಾರ ಮುಗಿಯಿತು <><>